

**ಡಾ. ಅನ್ನಪೂರ್ಣ ಎನ್. ಎಸ್.**

**ವಿಳಾಸ : ಡಾ. ಅನ್ನಪೂರ್ಣ ಎನ್.ಎಸ್ w/o ಪ್ರಮೋದ್ ರಾಜ್**
**#298, ಎನ್.ಜಿ.ಒ ಕಾಲೋನಿ,**
**ನಂಜನಗೂಡು– 571301**

**ಶೈಕ್ಷಣಿಕ ವಿವರ :** ಕನ್ನಡ ವಿಷಯದಲ್ಲಿ ಪಿಹೆಚ್.ಡಿ,
ಕನ್ನಡ ಎಂ.ಎ. (ಜೆ.ಆರ್ ಎಫ್– ಎನ್.ಇ.ಟಿ)
ಸಮೂಹ ಮಾಧ್ಯಮ ಮತ್ತು ಪತ್ರಿಕೋದ್ಯಮ ಎಂ. ಎ
ಭಾಷಾವಿಜ್ಞಾನ ಸ್ನಾತಕೋತ್ತರ ಡಿಪ್ಲೊಮಾ,
ಭಾಷಾಂತರ ಸ್ನಾತಕೋತ್ತರ ಡಿಪ್ಲೊಮಾ,
ಇಂಗ್ಲೀಷ್ ಸ್ನಾತಕೋತ್ತರ ಡಿಪ್ಲೊಮಾ, ಎಂ.ಎ
ಸ್ನಾತಕೋತ್ತರ ಡಿಪ್ಲೊಮಾ, ಸಮೂಹ ಮಾಧ್ಯಮ ಮತ್ತು ಪತ್ರಿಕೋದ್ಯಮ

ಪದವಿಯಲ್ಲಿ ಅತಿಹೆಚ್ಚು ಅಂಕಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ 91ನೇ ವಾರ್ಷಿಕ ಘಟಿಕೋತ್ಸವದಲ್ಲಿ 2 ಚಿನ್ನದ ಪದಕ 4 ಬಹುಮಾನ ಪಡೆದಿದ್ದು ಕನ್ನಡ ಎಂ.ಎ ಸ್ನಾತಕೋತ್ತರ ಪದವಿಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಆರನೇ ರ್‍ಯಾಂಕ್. ಹತ್ತಕ್ಕೂ ಹೆಚ್ಚು ರಾಷ್ಟ್ರ ಮತ್ತು ರಾಜ್ಯಮಟ್ಟದ ವಿಚಾರ ಸಂಕಿರಣಗಳಲ್ಲಿ ಪ್ರಬಂಧ ಮಂಡನೆ ಮಾಡಿದ್ದು, 2015ನೇ ಸಾಲಿನ ರಾಜ್ಯ ಮಟ್ಟದ 'ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆ'ಯ ವಿದ್ಯಾರ್ಥಿ ವಿಭಾಗದಲ್ಲಿ 'ಅವನೂ ಅವಳೂ' ಕಥೆಯ ರಚನೆಗೆ ಬಹುಮಾನ, 2016ನೇ ಸಾಲಿನ ರಾಜ್ಯ ಮಟ್ಟದ ಪ್ರೊ ಎಲ್ ಬಸವರಾಜು ಸ್ಮಾರಕ ಸಂಶೋಧನ ಲೇಖನ ಸ್ಪರ್ಧೆಯಲ್ಲಿ ಬಹುಮಾನ., 2017ರಲ್ಲಿನ ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ. ಆಯೋಜಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನ, ಕರ್ನಾಟಕ ಲೇಖಕಿಯರ ಸಂಘದ ರಾಜ್ಯಮಟ್ಟದ ಕಥಾಸ್ಪರ್ದೆಯಲ್ಲಿ ತ್ರಿವೇಣಿ ದತ್ತಿಬಹುಮಾನವನ್ನು ಪಡೆದಿದ್ದೇನೆ.

ಕೇಂದ್ರ ಸಾಹಿತ್ಯ ಅಕಾಡೆಮಿಯ 'ಕವಿ ಸಮಯ' ವಿಶೇಷ ಕವಿಗೋಷ್ಠಿ, ಸೇರಿದಂತೆ ಹದಿನೈದಕ್ಕೂ ಹೆಚ್ಚು ರಾಜ್ಯ ಮತ್ತು ಜಿಲ್ಲಾ ಮಟ್ಟದ ಕವಿಗೋಷ್ಠಿಗಳಲ್ಲಿ ಕವನ ವಾಚನ ಮಾಡಿದ್ದು, ಅಜ್ಜಿಗೊಂದು ಪ್ರಶ್ನೆ– ಕವನ ಸಂಕಲನವನ್ನು 2013ರಲ್ಲಿ ಪ್ರಕಟಿಸಿದ್ದು, ಪ್ರಜಾವಾಣಿ, ಮಯೂರ, ಸಂಕ್ರಮಣ, ಆಂದೋಲನ, ಸತ್ಯಪ್ರಭ ಮುಂತಾದ ಸಾಹಿತ್ಯಕ ಪತ್ರಿಕೆಗಳಲ್ಲಿ ನನ್ನ ಕಥೆ–ಕವನಗಳು ಪ್ರಕಟಗೊಂಡಿವೆ.'ಅಜ್ಜಿಗೊಂದು ಪ್ರಶ್ನೆ' ಕವನ ಸಂಕಲನಕ್ಕೆ, ಕನ್ನಡ ಸಾಹಿತ್ಯ ಪರಿಷತ್ತಿನ 2013–14ನೇ ಸಾಲಿನ ದಿ॥ ಶ್ರೀಮತಿ ಕೆ.ವಿ.ರತ್ನಮ್ಮ ದತ್ತಿ ಪ್ರಶಸ್ತಿ. ಸಂಕ್ರಮಣ ಸಾಹಿತ್ಯ ಸ್ಪರ್ಧೆಯಲ್ಲಿ 'ದೇವಸ್ಥಾನ' ಹನಿಗವನ ರಚನೆಗೆ ಬಹುಮಾನ.

ಅರವತ್ತಕ್ಕೂ ಅಧಿಕ ಸಂಶೋಧನಾ ಲೇಖನಗಳನ್ನು ರಚಿಸಿದ್ದು, ಚಿಂತನ ಚಿಗುರು, ಮಹಿಳಾ ಕಾದಂಬರಿಗಳ ಸಾಮಾಜಿಕ ನೆಲೆಗಳು, ಸಖೀಕಥನ, ಮಹಾಕಾವ್ಯ ಪರಂಪರೆ, ಶಬ್ದಮಣಿದರ್ಪಣದ ಕನ್ನಡ ಅಸಾಧಾರಣ ಲಕ್ಷಣಗಳು, ಇವು ಪ್ರಕಟಿತ ಕೃತಿಗಳು.